# ದಿವಾಣಿ ನ್ಯಾಯಾಧೀಶರು ಮತ್ತು ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹಡಗಲಿ

ಸಿ.ಸಿ. ನಂಃ 419/2019

ಸಿ.ಡಬ್ಲೂಃ 01 ಪಿಡಬ್ಲೂಃ 01

ಸಾಕ್ಷಿದಾರರ ಹೆಸರುಃ ವೀರಶೇಖರ ತಂದೆಃ ವೀರಣ್ಣಚಾರ್
ವಯಸ್ಸುಃ 62 ವರ್ಷ
ಉದ್ಯೋಗಃ ನಿವೃತ್ತ ಎ.ಎಸ್.ಐ
ಸಾಕೀನಃ ಬಳ್ಳಾರಿ.

ದಿಃ 04-01-2022 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.

ಮುಖ್ಯ ವಿಚಾರಣೆಃ ಸ.ಸ.ಅ ರವರಿಂದ ;

ನಾನು **2016** ರಿಂದ ದಿಃ **31-08-2019** ರವರೆಗೆ ನಾನು ಎ.ಎಸ್.ಐ ಆಗಿ ಹಿರೇಹಡಗಲಿ ಪೋಲೀಸ್ ಠಾಣೆಯಲ್ಲಿ ಕೆಲಸ ಮಾಡಿರುತ್ತೇನೆ.

**02.** ದಿಃ **04-07-2017** ರಂದು ಹೊಳಲು ಉಪ ಠಾಣೆಯಲ್ಲಿ ಚಾಸಾ-**02** ರಿಂದ **04** ರವರು ಠಾಣೆಯಲ್ಲಿದ್ದಾಗ ಚಾಸಾ-**11** ರವರಿಗೆ ಬಂದ ಮಾಹಿತಿ ಮೇರೆಗೆ ಹೊಳಲು ಠಾಣೆಗೆ ಬಂದು ಹೊಳಲು ಗ್ರಾಮದ ಗೋಣಿ ಬಸವೇಶ್ವರ ದೇವಸ್ಥಾನದ ಹತ್ತಿರದ ಸಾರ್ವಜನಿಕ ಸ್ಥಳದಲ್ಲಿ ಅರೋಪಿತನು ಅಕ್ರಮ ಮದ್ಯ ಮಾರಾಟ ಮಾಡುತ್ತಿರುವ ಬಗ್ಗೆ ಮಾಹಿತಿ ಬಂದ ಮೇರೆಗೆ ಚಾಸಾ-**02** ರವರಿಗೆ ಚಾಸಾ-**11** ರವರು ಇಬ್ಬರು ಪಂಚರನ್ನು ಕರೆದುಕೊಂಡು ಬರಲು ತಿಳಿಸಿದ್ದರಿಂದ ಚಾಸಾ-**02** ರವರು ಪಂಚರನ್ನಾಗಿ ಚಾಸಾ-**08** ಮತ್ತು **09** ರವರನ್ನು ಕರೆದುಕೊಂಡು ಬಂದಿರುತ್ತಾರೆ. ಸಮಯ ಮ. **03.10** ಗಂಟೆಗೆ ಖಾಸಗಿ ವಾಹನದಲ್ಲಿ ಪಂಚರ ಸಮಕ್ಷಮ ನಾನು ಮತ್ತು ಚಾಸಾ-**11,** ಚಾಸಾ-**2** ರಿಂದ **5** ರವರು ಹೊಳಲು ಗ್ರಾಮದ ಗೋಣಿ ಬಸವೇಶ್ವರ ದೇವಸ್ಥಾನದ ಹತ್ತಿರ ಹೋಗಿರುತ್ತೇವೆ. ಸಮಯ ಮ. **03.20** ಗಂಟೆಗೆ ಅಲ್ಲಿ ಒಬ್ಬ ವ್ಯಕ್ತಿಯ ಬಳಿಯಿದ್ದ ಒಂದು ರಟ್ಟಿನ ಡಬ್ಬಯನ್ನು ಪರಿಶೀಲಿಸಲಾಗಿ **180** ಎಂ.ಎಲ್. ನ **12** ಕೊಡ್ಯಸ್ **xxx** ರಂಮ್ ನ **12** ಪೌಚುಗಳು ಮತ್ತು **180** ಎಂ.ಎಲ್ ನ ಎ **1** ಹೈ ವಿಸ್ಕಿಯ **10** ಬಾಟಲಿಗಳು ಕಂಡು ಬಂದಿರುತ್ತವೆ ಮತ್ತು ಆತನ ಹತ್ತಿರ ನಗದು ಹಣ ರೂ.**1,590/-** ಗಳು ಸಿಕ್ಕಿರುತ್ತದೆ. ಸಮಯ ಮ.**03.30** ರಿಂದ **04.40** ಗಂಟೆಯವರೆಗೆ ಪಂಚರಾದ ಚಾಸಾ-**08** ಮತ್ತು **09** ರವರ ಸಮಕ್ಷಮ ಪಂಚೆನಾಮೆಯನ್ನು ಜರೂಗಿಸಿ ಮುಗಿಸಿ ನಂತರ ಚಾಸಾ-**11** ರವರು

ಆರೋಪಿತನನ್ನು ಮತ್ತು  ಸಿಕ್ಕ ಮಾಲುಗಳನ್ನು ವಶಪಡಿಸಿಕೊಂಡು ಹಿರೇಹಡಗಲಿ ಪೊಲೀಸ್ ಠಾಣೆಗೆ ಸಂಜೆ **05.00** ಗಂಟೆಗೆ ಕರೆದುಕೊಂಡು ಹೋಗಿರುತ್ತಾರೆ. ಮುಂದಿನ ಕ್ರಮವನ್ನು ಚಾಸಾ-**11** ರವರು ಜರೂಗಿಸಿರುತ್ತಾರೆ. ನ್ಯಾಯಾಲಯದ ಮುಂದೆ ಇರುವ ಆರೋಪಿತನನ್ನು ನೋಡಿ ಗುರುತಿಸಿರುತ್ತೇನೆ. ಚಾಸಾ-**11** ರವರು ಜಪ್ತುಪಡಿಸಿಕೂಂಡ ಮುದ್ದೆಮಾಲುಗಳನ್ನು ಈಗ ನೋಡುತ್ತಿದ್ದೇನೆ. ನಾನು ನೋಡುತ್ತಿರುವ ಮುದ್ದೆಮಾಲುಗಳಲ್ಲಿ ಈಗ **8** ಬಾಟಲಿಗಳು ಮತ್ತು **10** ಪೌಚ್ ಗಳು ಇರುತ್ತವೆ. ಅವುಗಳನ್ನು ಮು.ಮಾ-**1** ರಿಂದ **18** ಎಂದು ಗುರುತಿಸಲಾಯಿತು. ಆರೋಪಿತನಿಂದ ಜಪ್ತುಪಡಿಸಿಕೊಂಡ ರೂ.**1590/-** ಗಳನ್ನು ಈಗ ನಾನು ನೋಡುತ್ತಿದ್ದೇನೆ ಸದರಿ ಮೊತ್ತವನ್ನು ಮು.ಮಾ-**19** ಎಂದು ಗುರುತಿಸಲಾಯಿತು.

**(** ಮು.ಮಾ-**19** ರೂ.**1590/-** ಗಳನ್ನು ಇಂದೇ ನ್ಯಾಯಾಲಯಕ್ಕೆ ಸ.ಸ.ಅ ರವರು ಹಾಜರುಪಡಿಸಿರುತ್ತಾರೆ. ಅದಕ್ಕೆ ಪಿ.ಆರ್. ನಂಬರ್ ನ್ನು ನೀಡಲಾಯಿತು. ಸದರಿ ಮೊತ್ತವನ್ನು **Valuable Box** ನಲ್ಲಿ ಇಡಲು ಈ ಮೂಲಕ ಆದೇಶಿಸಲಾಗಿರುತ್ತದೆ.**)**

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ.ಕೆ.ಕೆ ವಕೀಲರಿಂದಃ</u>

ರೇಡ್ ಸಮಯದಲ್ಲಿ ಒಟ್ಟು ನಾವು **6** ಜನ ಇದ್ದೇವು. ನಮ್ಮ ಉಪ ಠಾಣೆಯಿಂದ ಕೃತ್ಯ ಸ್ಥಳವು ಸುಮಾರು ಅರ್ದ ಕಿ.ಮೀ ದೂರದಲ್ಲಿ ಇದೆ. ಗೋಣಿ ಬಸವೇಶ್ವರ ದೇವಸ್ಥಾನದ ನಮ್ಮ ಠಾಣೆಯಿಂದ ಪೂರ್ವ ದಿಕ್ಕಿಗೆ ಇದೆ. ಗೋಣೆ ಬಸವೇಶ್ವರ ದೇವಸ್ಥಾನದ ಬಾಗಿಲು ಉತ್ತರ ದಿಕ್ಕಿಗೆ ಇರುತ್ತದೆ. ನಾವು ಹೋದ ಖಾಸಗಿ ವಾಹನ ಟಾಟಾ ಎಸ್ ಆಗಿತ್ತು ಅದರ ನಂಬರ್ ಮತ್ತು ಮಾಲೀಕರು ಗೊತ್ತಿರುವುದಿಲ್ಲ. ಪಂಚೆನಾಮೆಯಲ್ಲಿ ಗುನ್ನೆ ಸಂಖ್ಯೆಯನ್ನು ನಮೂದಿಸಿರುತ್ತಾರೆ. ಪಂಚೆನಾಮೆಗೆ ಒಟ್ಟು ಮೂರು ಜನ ಸಹಿ ಮಾಡಿರುತ್ತಾರೆ. ಮಾದರಿಗಾಗಿ ತೆಗೆದ ಶ್ಯಾಂಪಲ್ ನ್ನು ನಾನು ನೋಡಿಲ್ಲ. ರೇಡ್ ಮಾಡುವ ಸಮಯದಲ್ಲಿ ಯಾವುದೇ ಮಾದರಿ ತೆಗೆದಿರುವುದಿಲ್ಲ. ವಶಪಡಿಸಿಕೊಂಡ ಮುದ್ದೆಮಾಲು **19** ರ ನೋಟುಗಳ ಮೌಲ್ಯ ಪಂಚೆನಾಮೆಯಲ್ಲಿ ನಮೂದಿಸಿಲ್ಲ. ಚಾಸಾ-**11** ರವರು ಮಾಹಿತಿ ನೀಡಿದಾಗ ಸಮಯ **03.00** ಗಂಟೆ ಆಗಿತ್ತು. ಚಾಸಾ-**02** ರವರು ಪಂಚರನ್ನು ಕರೆದುಕೊಂಡು ಬಂದರು ಎಂಬ ವಿಷಯ ಸುಳ್ಳು ಎಂದರೆ ಸರಿಯಲ್ಲ. ಆರೋಪಿತನು ಗುನ್ನೆ ಸ್ಥಳದ ಹತ್ತಿರ ಮದ್ಯ ಮಾರಾಟ ಮಾಡುತ್ತಿದ್ದ ಎಂಬ ಸಂಗತಿ ಸುಳ್ಳು ಎಂದರೆ ಸರಿಯಲ್ಲ. ಆರೋಪಿತನ ಕಡೆಯಿಂದ ಯಾವುದೇ ಮುದ್ದೆಮಾಲನ್ನು ಜಪ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿತನ ಕಡೆಯಿಂದ ಯಾವುದೇ ಹಣವನ್ನು ಜಪ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಪಂಚೆನಾಮೆ ಪಂಚರ ಸಹಿ ಪಡೆದಿಲ್ಲ ಮತ್ತು ಯಾವುದೇ ಪಂಚೆನಾಮೆ ಆಗಿಲ್ಲ ಎಂದರೆ ಸರಿಯಲ್ಲ. ಘಟನೆ

ದಿನದಂದು ಆರೋಪಿತನನ್ನು ದಸ್ತಗಿರಿ ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ. ಅಂಕಿ ಸಂಖ್ಯೆಗಳಿಗಾಗಿ ಈ ಪ್ರಕರಣವನ್ನು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಆರೋಪಿತನು ಯಾವುದೇ ತಪ್ಪು ಮಾಡಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ: ಇಲ್ಲ.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

ಸಹಿ/-
(ವೀರೇಶ ಕುಮಾರ ಸಿ. ಕೆ.)
ದಿವಾಣಿ ನ್ಯಾಯಾಧೀಶರು ಮತ್ತು ನ್ಯಾಯಿಕ
ದಂಡಾಧಿಕಾರಿಗಳು., ಹಡಗಲಿ.